

بسم اللهِ الرّحمٰن الرّحيم

# *“ನಿನ್ನ ಬಳಿಗೆ ಪ್ರಯಾಸಪಟ್ಟು ಜನರು ತಂಡ ತಂಡವಾಗಿ ಆಗಮಿಸುವರು”* ಎಂಬ ಇಲ್‌ಹಾಮಿನ ಪೂರ್ತೀಕರಣದ ಕೆಲವು ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ **12-09-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಕೆಲವು ದಿನಗಳ ಹಿಂದೆ ಅಮೇರಿಕದಿಂದ ನನಗೆ ಒಂದು ಪತ್ರ ಬಂತು. ಅದರಲ್ಲಿ ಒಬ್ಬ ಅಹ್ಮದಿ ಹೀಗೆ ಬರೆದಿದ್ದರು: “ತಾವು ಜಲ್ಸದಲ್ಲಿ, ಜನರು ಅಹ್ಮದಿಯರಾದ ಬಗ್ಗೆ ಕೆಲವು ಘಟನೆಗಳನ್ನು ವಿವರಿಸಿದಿರಿ. ತಬ್ಲೀಗ್ ಮೂಲಕ ಮತ್ತು ನೇರವಾಗಿ ಅಲ್ಲಾಹನಿಂದ ಮಾರ್ಗದರ್ಶನ ಪಡೆದು ಅಹ್ಮದಿಯತ್ತಿನ ಬಗ್ಗೆ ತಿಳಿಯಲು ಜನರು ಆಸಕ್ತರಾದ ಬಗ್ಗೆ ತಾವು ವಿವರಿಸಿದಿರಿ. ಆ ಮೂಲಕ ಜನರ ವಿಶ್ವಾಸ ಬಲಿಷ್ಠವಾಗುತ್ತಿದೆ. ಅಹ್ಮದಿಯತ್ತಿನ ಸತ್ಯತೆ ಜನರ ಹೃದಯದಲ್ಲಿ ಬೇರೂರುತ್ತದೆ. ಈ ವಿವರಣೆಗಳನ್ನು ಆಲಿಸಿದಾಗ ನನ್ನ ಹೃದಯದಲ್ಲಿ (ಎಂದರೆ ಪತ್ರ ಬರೆದವರ ಹೃದಯದಲ್ಲಿ) ಹೀಗೆ ಆಶೆ ತಲೆದೋರಿತು. ಲೋಕದ ಈ ಪ್ರದೇಶದಲ್ಲಿ ನನ್ನ ಮೂಲಕ ಯಾರಾದರೂ ಅಹ್ಮದಿಯತ್ತಿಗೆ ಸೇರಿದರೆ ಎಷ್ಟು ಚೆನ್ನಾಗಿತ್ತು ಎಂದು. ನಾನು ಸಹ ಯಾವುದಾದರೂ ಇಂತಹ ದೃಷ್ಟಾಂತ ಕಾಣುತ್ತಿದ್ದರೆ ಎಷ್ಟು ಉತ್ತಮವಾಗಿತ್ತು.

ಅವರು ಬರೆಯುತ್ತಾರೆ: ಈ ಯೋಚನೆಗಳಲ್ಲಿ ನಾನು ಮುಳುಗಿರುವಾಗ ನನಗೊಂದು ಫೋನ್ ಬಂದಿತು. ಒಬ್ಬ ಮಹಿಳೆ ಹೀಗೆ ಫೋನ್‌ನಲ್ಲಿ ಹೇಳಿದರು: ನಾನು ವೆಬ್‌ಸೈಟ್ ಮೂಲಕ ನಿಮ್ಮ ಫೋನ್ ನಂಬರನ್ನು ಕಂಡು ನಿಮಗೆ ಫೋನ್ ಮಾಡುತ್ತಿದ್ದೇನೆ. ನನಗೆ ಇಸ್ಲಾಮ್ ಬಗ್ಗೆ ತಿಳಿಯಲು ಆಸಕ್ತಿ ಇದೆ. ನಾನು ತಮ್ಮನ್ನು ಭೇಟಿಯಾಗಲು ಬಯಸುತ್ತೇನೆ ಎಂದು ಆ ಮಹಿಳೆ ಹೇಳಿದರು. “ಸರಿ ನೀವು ಬನ್ನಿರಿ” ಎಂದು ಅವರು ತಿಳಿಸಿದರು. ಆ ಮಹಿಳೆ ಬಹಳ ದೂರದ ಯಾತ್ರೆ ಮಾಡಿ ಆ ಅಹ್ಮದಿಯ ಬಳಿಗೆ ತಲಪಿದರು. ಆ ಮಹಿಳೆ ತನಗೆ ಇಸ್ಲಾಮ್ ಬಗ್ಗೆ ತಿಳಿಯಲು ಆಸಕ್ತಿ ಹೇಗೆ ಉಂಟಾಯಿತೆಂದು ವಿವರಿಸಿದರು. ಅವರು ಇಂಟರ್‌ನೆಟ್ ಮೂಲಕ ಹೆಚ್ಚಿನ ಮಾಹಿತಿ ಗಳಿಸಿದ್ದರು. ಅವರ ಪತಿ ಮತ್ತು ಪತಿಯ ಮನೆಯವರು ತೀವ್ರವಾದ ಕ್ರೈಸ್ತ ವಿಶ್ವಾಸವನ್ನು ಹೊಂದಿದವರಾದ ಕಾರಣ ಆ ಮಹಿಳೆಯನ್ನು ವಿರೋಧಿಸಿದರು. ಈ ಕಾರಣದಿಂದ ಪತಿಯಿಂದ ವಿವಾಹ ವಿಚ್ಛೇಧನೆ ಪಡೆಯಬೇಕಾಯಿತು. ಅವರ ಇಬ್ಬರು ಮಕ್ಕಳನ್ನು ನ್ಯಾಯಾಲಯದ ತೀರ್ಪು ಪ್ರಕಾರ ಪತಿಗೆ ವಹಿಸಿ ಕೊಡಬೇಕಾಯಿತು. ಹೀಗೆಲ್ಲಾ ಆದರೂ ಆ ಮಹಿಳೆ ಸತ್ಯ ವಿಶ್ವಾಸಕ್ಕೆ ಆದ್ಯತೆ ನೀಡಿದರು. ಮತ್ತು ಎಲ್ಲಾ ಸಂಬಂಧಗಳನ್ನು ತ್ಯಜಿಸಿದರು. ಅವರು ಹೇಳುತ್ತಾರೆ: ನಾನು ಅಹ್ಮದಿಯಾ ಜಮಾಅತಿನ ವೆಬ್‌ಸೈಟನ್ನು ನೋಡಿ ಗಾಢವಾಗಿ ಚಿಂತಿಸಿದೆ. ನಾನು ಎಂ.ಟಿ.ಎ. ಸಹ ನೋಡಿದೆ. ನಾನು ಇತರ ಮುಸ್ಲಿಮ್ ಪಂಗಡಗಳ ಬಗ್ಗೆ ಸಹ ಮಾಹಿತಿ ಗಳಿಸಿದೆ. ಆದರೆ ನನಗೆ ಅವುಗಳಿಂದ ಸಮಾಧಾನ ಸಿಗಲಿಲ್ಲ. ಇಸ್ಲಾಮ್ ಬಗ್ಗೆ ತಿಳಿಯಲು ಅಹ್ಮದಿಯಾ ಜಮಾಅತಿನ ಸಾಹಿತ್ಯಗಳನ್ನು ಓದುವ ಕಡೆಗೆ ನನ್ನ ಗಮನ ಹರಿಯುತ್ತಿತ್ತು.

ಆ ಅಹ್ಮದಿ ಸ್ನೇಹಿತ ಆಕೆಯೊಂದಿಗೆ ಹೇಳಿದರು: ನಮ್ಮ ಲಂಡನ್ ಜಲ್ಸ ಎಂ.ಟಿ.ಎ.ದಲ್ಲಿ ಬಿತ್ತರಿಸಲಾಗಿತ್ತು. ಆಗ ಆ ಮಹಿಳೆ ಹೇಳಿದರು: ನಾನು ಆ ಜಲ್ಸದ ಕಾರ್ಯಕ್ರಮ ಆಲಿಸಿದೆ. ನಾನು ನೈಜ ಇಸ್ಲಾಮನ್ನು ಪ್ರವೇಶಿಸಲು ಇಚ್ಛಿಸುತ್ತೇನೆ.

ಅಹ್ಮದಿ ಹೀಗೆ ಹೇಳುತ್ತಾರೆ: ನನ್ನೊಂದಿಗೆ ಆ ಮಹಿಳೆ ಮಾತನಾಡುತ್ತಿದ್ದಾಗ ನನ್ನ ಮಗಳು ಸಹ ಆಕೆಯ ಮಾತುಗಳನ್ನು ಆಲಿಸುತ್ತಿದ್ದಳು. ಯುನಿವರ್ಸಿಟಿಯಲ್ಲಿ ಕಲಿಯುತ್ತಿರುವ ಆಕೆ ಜಲ್ಸದ ಕಾರ್ಯಕ್ರಮಗಳಲ್ಲಿ ಕೆಲವರು ತಾವು ಅಹ್ಮದಿಯರಾದ ಬಗ್ಗೆ ವಿವರಿಸುತ್ತಿದ್ದಾಗ “ಅವರು ಹೇಳುವುದು ಕಥೆಗಳಾಗಿವೆ ಅಥವಾ ಅತಿಶಯೋಕ್ತಿಗಳಾಗಿವೆ ಎಂದು ನಾನು ಭಾವಿಸುತ್ತಿದ್ದೆ. ಆದರೆ ಈ ಮಹಿಳೆಯ ಮಾತುಗಳಿಂದ ನನ್ನ ವಿಶ್ವಾಸ ಬಲಗೊಂಡಿದೆ. ಅಲ್ಲಾಹನೇ ಜನರ ಹೃದಯಗಳನ್ನು ಅಹ್ಮದಿಯತ್ತಿನ ಕಡೆಗೆ ತಿರುಗಿಸುತ್ತಿದ್ದಾನೆ” ಎಂದು ಹೇಳಿದಳು.

ಅಲ್ಲಾಹನು ಹೇಗೆ ಜನರಿಗೆ ಮಾರ್ಗದರ್ಶನ ನೀಡುತ್ತಿದ್ದಾನೆ. ಇವುಗಳೆನ್ನೆಲ್ಲಾ ವಿವರಿಸಲು ಸಾಧ್ಯವಾಗದು. ಕೆಲವು ಘಟನೆಗಳನ್ನು ಸಂದರ್ಭ ಸಿಗುವಾಗ ವಿವರಿಸುವೆನು ಎಂದು ನಾನು ಹೇಳಿದ್ದೆನು. ಜಲ್ಸದಲ್ಲಿ ಆರಿಸಿದ ಕೆಲವು ಘಟನೆಗಳನ್ನು ಮಾತ್ರ ವಿವರಿಸಲಾಗುತ್ತದೆ. ಅದಕ್ಕೂ ಸಮಯ ಸಾಕಾಗುವುದಿಲ್ಲ. ಈ ವರ್ಷದ ಘಟನೆಗಳು ಸಹ ಅನೇಕ ಇವೆ. ಈಗ ನಾನು ಕೆಲವು ಘಟನೆಗಳನ್ನು ವಿವರಿಸುತ್ತೇನೆ. ನಮ್ಮ ವಿಶ್ವಾಸ ವರ್ಧಿಸಲು ಅಹ್ಮದಿಯ್ಯತ್‌ಗೆ ಸೇರಿದ ನಂತರ ನಮಗೇನು ಲಭಿಸಿತು ಎಂದು ಪರಿಶೀಲಿಸುತ್ತಾ ಇರಬೇಕು.

ಅಹ್ಮದಿಯಾ ಜಮಾಅತಿಗೆ ಹೊಸದಾಗಿ ಸೇರಿದವರ ಬಗ್ಗೆ ಅವರಿಗೆ ಅಲ್ಲಾಹನು ಹೇಗೆ ಮಾರ್ಗದರ್ಶನ ನೀಡಿದನು ಎನ್ನುವುದರ ಬಗ್ಗೆ ವಿವರಿಸುವೆನು. ಈ ಘಟನೆಗಳನ್ನು ಕೇವಲ ಆಸಕ್ತಿದಾಯಕ ಘಟನೆಗಳೆಂದು ಮಾತ್ರ ಪರಿಗಣಿಸಿ ಆಲಿಸಬಾರದು. ಈ ಘಟನೆಗಳು ನಮ್ಮ ಈಮಾನನ್ನು ವರ್ಧಿಸುವವುಗಳಾಗಬೇಕು. ನಾವು ನಮ್ಮ ವಿಶ್ವಾಸದ ಸ್ಥಿತಿಯನ್ನು ಪರಿಶೀಲಿಸಬೇಕು. ಅಲ್ಲಾಹನು ನಮ್ಮ ಜಮಾಅತ್‌ನೊಂದಿಗೆ ವರ್ತಿಸುವ ರೀತಿಯನ್ನು ಕಂಡು ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರಾಗಬೇಕು. ನಾವು ನಮ್ಮ ಹೊಣೆಗಾರಿಕೆಗಳ ಬಗ್ಗೆ ಪ್ರಜ್ಞೆಯುಳ್ಳವರಾಗಿ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರಾಗಬೇಕು. ಲೋಕಕ್ಕೆ ಸತ್ಯದ ಸಂದೇಶ ತಲಪಿಸುವುದು ಮತ್ತು ಲೋಕಕ್ಕೆ ಮಾರ್ಗದರ್ಶನ ನೀಡುವುದು ನಮ್ಮ ಕೆಲಸವಾಗಿದೆ. ಇದು ನಮಗೆ ಕಡ್ಡಾಯವಾಗಿರುವುದಾಗಿದೆ. ನಾವು ಈ ಕರ್ತವ್ಯವನ್ನು ಈಡೇರಿಸುವ ಪ್ರಯತ್ನ ಮಾಡುವುದರ ಜೊತೆಗೆ ನಾವು ನಮ್ಮ

ನಡೆವಳಿಕೆಗಳನ್ನು ಅಲ್ಲಾಹನು ನಮಗೆ ಹೇಳಿಕೊಟ್ಟ ರೀತಿಯಲ್ಲಿ ಪರಿವರ್ತಿಸುವುದು ಸಹ ಆವಶ್ಯಕವಾಗಿದೆ. ನಮ್ಮ ಕರ್ಮಗಳನ್ನು ಕಂಡು ಹೊಸದಾಗಿ ಅಹ್ಮದಿಯಾ ಜಮಾಅತಿಗೆ ಸೇರುವವರ ವಿಶ್ವಾಸ ಇನ್ನಷ್ಟು ಬಲಗೊಳ್ಳಬೇಕು.

ಅಲ್ಲಾಹನ ಸಹಾಯಗಳು ಮತ್ತು ಅವನು ಮಾರ್ಗದರ್ಶನ ನೀಡಿದ ಬಗ್ಗೆ ಕೆಲವು ಘಟನೆಗಳನ್ನು ವಿವರಿಸುವೆನು.

ಟ್ಯೂನಿಸ್‌ನಿಂದ ಮನಿಯ ಸಾಹಿಬ ಎಂಬ ಮಹಿಳೆ ಹೀಗೆ ಬರೆದಿದ್ದಾರೆ: ನನಗೆ ಓದಿನಲ್ಲಿ ಬಹಳ ಅಭಿರುಚಿ ಇದೆ. ನಾನು ಪವಿತ್ರ ಖುರ್‌ಆನ್ ಮತ್ತು ಇತರ ಇಸ್ಲಾಮೀ ಗ್ರಂಥಗಳನ್ನು ಪಾರಾಯಣ ಮಾಡಿದ್ದೇನೆ. ಆದರೆ ಅನೇಕ ವಿಷಯಗಳು ನನಗೆ ಅರ್ಥವಾಗುತ್ತಿರಲಿಲ್ಲ. ಉದಾಹರಣೆಗೆ ಸೂರತುನ್ನಿಸಾದ ವಚನ '**ವಮಾ ಖತಲೂಹು ವಮಾ ಸಲಬೂಹು ವಲಾಕಿನ್ ಶುಬ್ಬಿಹ ಲಹುಮ್**' ಎಂಬ ವಚನ. ಅದೇ ರೀತಿ ಈಸಾಮಸೀಹರ ಮರಣದ ಬಗ್ಗೆ ಇರುವ ಬೇರೆ ವಚನಗಳ ಬಗ್ಗೆ ಸಹ ನಾನು ಯೋಚಿಸುತ್ತಿದ್ದೆ. ಈಸಾ ಅಲೈಹಿಸ್ಸಲಾಮ್ ಮೃತರಾಗಿರುವರೋ ಜೀವಂತವಾಗಿ ಆಕಾಶದಲ್ಲಿರುವರೋ? ಎಂದು ನಾನು ಯೋಚಿಸುತ್ತಿದ್ದೆ. ರಿಯಾಝುಸ್ಸಾಲಿಹೀನ್ ಎಂಬ ಗ್ರಂಥದಲ್ಲಿ ದಜ್ಜಾಲನ ಲಕ್ಷಣಗಳ ಬಗ್ಗೆ ವಿವರಣೆಗಳನ್ನು ನಾನು ಓದಿ ಯೋಚಿಸಿದೆ. **ಖೈರ ಉಮ್ಮತ್**ನಲ್ಲಿ (ಅತ್ಯುತ್ತಮ ಸಮುದಾಯದಲ್ಲಿ) ಇಂತಹ ವ್ಯಕ್ತಿ ಹೇಗೆ ತಾನೆ ಬರಲು ಸಾಧ್ಯ? ಎಂದು ಯೋಚಿಸುತ್ತಿದ್ದೆ. ಈಸಾ ಅಲೈಹಿಸ್ಸಲಾಮ್ ಆಕಾಶದಲ್ಲಿ ಕುಳಿತು ಏನು ಮಾಡುತ್ತಿದ್ದಾರೆ ಎಂದು ಸಹ ನಾನು ಯೋಚಿಸುತ್ತಿದ್ದೆ. ನಾನು ಈ ವಿಷಯಗಳ ಬಗ್ಗೆ ಆತಂಕಗೊಂಡು ಅಲ್ಲಾಹನಿಂದ ಮಾರ್ಗದರ್ಶನವನ್ನು ಬೇಡುತ್ತಿದ್ದೆನು. ಒಂದು ದಿನ ಟಿ.ವಿ. ಚ್ಯಾನಲ್ ಬದಲಾಯಿಸುವಾಗ ಆಕಸ್ಮಿಕವಾಗಿ ಎಂ.ಟಿ.ಎ. ಚ್ಯಾನಲ್ ಲಭಿಸಿತು. ಇತರ ಟಿ.ವಿ. ಚ್ಯಾನಲ್‌ಗಳಿಗಿಂತ ಅದು ಭಿನ್ನವಾಗಿತ್ತು. ಆಗ ಅದರಲ್ಲಿ ಒಬ್ಬ ಪಾದರಿಯೊಂದಿಗೆ ಈಸಾ ಅಲೈಹಿಸ್ಸಲಾಮರ ಮರಣದ ಬಗ್ಗೆ ವಾದ ವಿವಾದ ನಡೆಯುತ್ತಿತ್ತು. ಇತರ ಚ್ಯಾನಲ್‌ಗಳಿಗೆ ಹೋಲಿಸಿದಾಗ ಈ ಚ್ಯಾನಲ್‌ನಲ್ಲಿ ಭಾಗವಹಿಸುವವರು ಬಹಳ ಗಂಭೀರವಾಗಿ ಮಾತನಾಡುತ್ತಿದ್ದರು. ವಾಗ್ದತ್ತ ಮಸೀಹರಾಗಿ ಹಝ್ರತ್ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಆಗಮಿಸಿದ ಬಗ್ಗೆ ನನಗೆ ತಿಳಿಯಿತು. ನಾನು ಅನಂತರ ನಿರಂತರವಾಗಿ ಈ ಚ್ಯಾನಲ್ ಆಲಿಸಲು ತೊಡಗಿದೆ. ನನಗೆ ಎಲ್ಲಾ ಸಮಸ್ಯೆಗಳ ಬಗ್ಗೆ ಪರಿಹಾರ ದೊರಕಿತು. ನಾನು ಅಹ್ಮದಿ ಆಗುವ ಮೊದಲು ಮೃತ್ಯು ನನಗೆ ಬರದಿರಲಿ ಎಂದು ನಾನು ಪ್ರಾರ್ಥಿಸಿದೆ. ಈಗ ನಾನು ಅಹ್ಮದಿಯಾ ಜಮಾಅತಿಗೆ ಸೇರಿರುವೆನು. ಇದು ಅಲ್ಲಾಹನಿಂದ ನನಗೆ ಲಭಿಸಿದ ಬಹಳ ದೊಡ್ಡ ಅನುಗ್ರಹವಾಗಿದೆ.

ಯಮನ್ ದೇಶದಿಂದ ರಮದಾನ್ ಸಾಹೇಬ್ ಬರೆಯುತ್ತಾರೆ: ನಾನು ಚೈನಾ ದೇಶಕ್ಕೆ ಹೋದಾಗ ಅಲ್ಲಿನ ಚೀನೀ ಜನರನ್ನು ಬಹಳ ಒಳ್ಳೆಯವರಾಗಿ ಕಂಡೆನು. ಕೆಲವು ಅರಬಿಗಳು ಅವರ ಒಳ್ಳೆಯತನದ ಕಾರಣ ದುರ್ಲಾಭಗಳನ್ನು ಪಡೆದು ಅನಂತರ ಅವರನ್ನು ನಿಂದಿಸುವುದನ್ನು ಸಹ ಕಂಡೆನು. ನಾನು ಯೋಚಿಸುತ್ತಿದ್ದೆ– ಈ ಜನರು ಇಷ್ಟೆಲ್ಲಾ ಸದ್ಗುಣಗಳನ್ನು ಹೊಂದಿದವರಾಗಿದ್ದರೂ ನರಕಕ್ಕೆ ಹೋಗುವವರೂ ನಾವು ನಾಮಮಾತ್ರ ಮುಸ್ಲಿಮರಾಗಿ ಸ್ವರ್ಗಕ್ಕೆ ಹೋಗುವವರೂ ಆಗಲು ಹೇಗೆ ಸಾಧ್ಯ? ನಾನು ಈ ಬಗ್ಗೆ ಬಹಳ ಯೋಚನೆ ಮಾಡುತ್ತಿದ್ದೆ. ನಾನು ಇಸ್ಲಾಮೀ ಗ್ರಂಥಗಳನ್ನು ಪಾರಾಯಣ ಮಾಡಿದೆ. ಅನೇಕ ಇಸ್ಲಾಮೀ ಟಿ.ವಿ. ಚ್ಯಾನಲ್‌ಗಳನ್ನು ನೋಡಿದೆ. ಒಂದು ದಿನ ಆಕಸ್ಮಿಕವಾಗಿ ಎಂ.ಟಿ.ಎ. ಕಂಡೆನು. ಅದರಲ್ಲಿ ವಿವರಿಸಲಾಗುವ ಸಾಕ್ಷ್ಯಾಧಾರಗಳು ಬಹಳ ಬಲವತ್ತಾಗಿದ್ದುವು. ಅವುಗಳ ಶಕ್ತಿಯಿಂದ ಪ್ರಭಾವಿತವಾಗಿ ನನ್ನ ಶರೀರ ಕಂಪಿಸುತ್ತಿತ್ತು. ನನ್ನ ಶರೀರಕ್ಕೆ ವಿದ್ಯುಚ್ಛಕ್ತಿಯ ಆಘಾತ ಉಂಟಾದ ಹಾಗೆ ಭಾಸವಾಗುತ್ತಿತ್ತು. ಅನಂತರ ಸ್ಥಿರವಾಗಿ ಎಂ.ಟಿ.ಎ. ನೋಡಲು ಪ್ರಾರಂಭಿಸಿದೆ. ಅದನ್ನು ನೋಡಿ ನನಗೆ ಅಳು ಬರುತ್ತಿತ್ತು. ಆದರೆ ಅದರ ಕಾರಣವೇನೆಂದು ತಿಳಿಯುತ್ತಿರಲಿಲ್ಲ. ಅಲ್ಲಾಹನೇ ನನಗೆ ಈ ಚ್ಯಾನಲ್ ಕಡೆಗೆ ಮಾರ್ಗದರ್ಶನ ನೀಡಿದನು ಎಂಬ ಭಾವನೆ ನನಗುಂಟಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯನ್ನು ತಿಳಿಯಲು ಅಲ್ಲಾಹನೊಂದಿಗೆ ನಾನು ನಿರಂತರ ಬೇಡಿಕೊಳ್ಳುತ್ತಾ ಇದ್ದೆ. ನನಗೆ ಅದಕ್ಕೆ ಉತ್ತರ ಶಾರೀರಿಕ ಮತ್ತು ಮಾನಸಿಕ ನೆಮ್ಮದಿ ಮೂಲಕ ಲಭಿಸುತ್ತಿತ್ತು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯವಂತರೆಂದು ನನಗೆ ಮನವರಿಕೆ ಆಗುತ್ತಿತ್ತು. ಅನಂತರ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಿದೆ. ನನ್ನ ಬಹುತೇಕ ಪಶ್ನೆಗಳಿಗೆ ಉತ್ತರ ಆ ಗ್ರಂಥಗಳಲ್ಲಿದ್ದುವು. ಅನಂತರ ನಾನು ಬೈಅತ್ ಮಾಡಿ ಜಮಾಅತಿನಲ್ಲಿ ಸೇರಿದೆ.

ಕಿರ್ಗಿಸ್ಥಾನದ ಜಮಾಅತಿನ ಅಧ್ಯಕ್ಷ ಸಲಾಮತ್ ಸಾಹೇಬರು ಬರೆಯುತ್ತಾರೆ: ನನ್ನ ಸಹೋದ್ಯೋಗಿಯಾಗಿರುವ ರಶ್ಯನ್ ಮಹಿಳೆ ಕ್ರೈಸ್ತ ಧರ್ಮದ ಅನುಯಾಯಿ ಆಗಿದ್ದರು. ಅವರೊಂದಿಗೆ ಧರ್ಮದ ಬಗ್ಗೆ ಚರ್ಚೆ ನಡೆಯುತ್ತಿತ್ತು. "ನನಗೆ ನನ್ನ ಧರ್ಮದ ಬಗ್ಗೆ ಸಮಾಧಾನವಿಲ್ಲ" ಎಂದು ಅವರು ಹೇಳುತ್ತಿದ್ದರು. ಆಕೆಗೆ ಇಸ್ಲಾಮ್ ಮತ್ತು ಅಹ್ಮದಿಯ್ಯತ್ ಬಗ್ಗೆ ಪರಿಚಯ ಮಾಡಿಕೊಡಲಾಯಿತು. ಆಕೆಗೆ 'ಇಸ್ಲಾಮ್ ಧರ್ಮ ತತ್ವಜ್ಞಾನ'ದ ರಶ್ಯನ್ ಭಾಷಾಂತರ ನೀಡಲಾಯಿತು. ಆಕೆ ಆ ಗ್ರಂಥ ಓದಿ ಹೇಳಿದರು: "ನನ್ನ ಪ್ರಶ್ನೆಗಳಿಗೆಲ್ಲಾ ಉತ್ತರ ಲಭಿಸಿದುವು. ಇಸ್ಲಾಮ್ ಸತ್ಯ ಧರ್ಮ ಎನ್ನುವುದರ ಬಗ್ಗೆ ನನಗೆ ನಂಬಿಕೆಯಾಗಿದೆ." ಆ ಮಹಿಳೆ ಜಮಾಅತ್ ಪ್ರಕಟಿಸಿದ ಬೇರೆ ಗ್ರಂಥಗಳನ್ನೂ ಓದಿದರು. ಆಕೆಗೆ ಇಸ್ಲಾಮ್ ಬಗ್ಗೆ ನಂಬಿಕೆ ವರ್ಧಿಸುತ್ತಾ ಹೋಯಿತು. ನಂತರ ಅವರು ಖಾದಿಯಾನಿಗೆ ಸಹ ಹೋದರು. ಬೈಅತ್ ಮಾಡಿದರಲ್ಲದೆ ವಸಿಯ್ಯತ್ ಪದ್ಧತಿಯಲ್ಲಿ ಸಹ ಸೇರಿದರು.

ಯಾರಿಗಾದರೂ ಸತ್ಯ ತಿಳಿಯುವ ಬಗ್ಗೆ ಅಭಿಲಾಷೆ ಇದ್ದರೆ ಅವರು ಅಲ್ಲಾಹನ ಮುಂದೆ ನಿರ್ಮಲ ಹೃದಯರಾಗಿ ಅಳುತ್ತಾ ಪ್ರಾರ್ಥಿಸಿ ಅಲ್ಲಾಹನಿಂದ ಮಾರ್ಗದರ್ಶನ ಕೋರಬೇಕು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ಉಪದೇಶಿಸಿದ್ದಾರೆ: ನೇರಮಾರ್ಗ ತೋರಿಸುವಂತೆ ಅಲ್ಲಾಹನೊಡನೆ ಪ್ರಾರ್ಥಿಸಬೇಕು. ಅಲ್ಲಾಹನಿಂದ ಮಾರ್ಗದರ್ಶನವನ್ನು ಬೇಡಿಕೊಳ್ಳಬೇಕು. ಹೀಗೆ ಬೇಡಿಕೊಳ್ಳುವವರು ಒಳ್ಳೆಯ ಉದ್ದೇಶ ಹೊಂದಿದವರಾಗಿದ್ದರೆ ಅಲ್ಲಾಹನು ಅವರಿಗೆ ಯಾವುದಾದರೂ ರೀತಿಯಲ್ಲಿ ಮಾರ್ಗದರ್ಶನ ನೀಡುವನು. ಅವನು ಸ್ವಪ್ನದ ಮೂಲಕ ಸಹ ಮಾರ್ಗದರ್ಶನ ನೀಡುತ್ತಾನೆ. ಅಹ್ಮದಿಯ್ಯತಿನ ಸತ್ಯತೆಯನ್ನು ಪ್ರಕಟಿಸುತ್ತಾನೆ. ಕೆಲವರು ಕಂಡ ಸ್ವಪ್ನಗಳನ್ನು ವಿವರಿಸುತ್ತೇನೆ.

ಜರ್ಮನಿಯ ಇಬ್ರಾಹೀಮ್ ಖಾರೂನ್ ಸಾಹೇಬ್ ಹೀಗೆ ಬರೆಯುತ್ತಾರೆ: ನಾನು ಜಮಾಅತ್ ಬಗ್ಗೆ ಪರಿಚಯವಾದ ನಂತರ ಎಂ.ಟಿ.ಎ. ನೋಡಲು ತೊಡಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆ ಬಗ್ಗೆ ತಿಳಿಯಲು ಪ್ರಾರ್ಥಿಸಿದೆ ಮತ್ತು ಇಸ್ತಿಖಾರ ಮಾಡಿದೆ. ಒಂದು ದಿನ ನಾನು ಒಂದು ಸ್ವಪ್ನ ಕಂಡೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಮಹಲ್‌ನಿಂದ ಬರುತ್ತಿದ್ದಾರೆ. ಆ ಮಹಲಿನ ಗೋಡೆಗಳಿಂದ ಪ್ರಕಾಶದ ಕಿರಣಗಳು ಹೊರಗೆ ಬರುತ್ತಿವೆ. ನಾನು ಇಹ್‌ರಾಮ್ ಉಡುಪು ಧರಿಸಿ ಅವರ ಭವನದ ಹೊಸ್ತಿಲಿನ ಸಮೀಪ ನಿಂತಿದ್ದೆ. ನಾನು ಬಾಗಿ ನನ್ನ ಕೈಗಳನ್ನು ನನ್ನ ಮೊಣಕಾಲುಗಳಲ್ಲಿರಿಸಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಕೈಯನ್ನು ನನ್ನ ತಲೆಯ ಮೇಲಿರಿಸಿದರು. ನಾನು ಅವರೊಂದಿಗೆ ಹೇಳಿದೆ **'ಸಮ್‌ಅನ್ ವ ತಾಅತನ್'** ಅನಂತರ ನನಗೆ ಎಚ್ಚರವಾಯಿತು. ಅನಂತರ ನನಗೆ ಬೈಅತ್ ಮಾಡುವ ಬಗ್ಗೆ ಮನಸ್ಸು ಉಂಟಾಯಿತು.

ಇಂತಹ ಘಟನೆಗಳನ್ನು ಆಲಿಸಿ ಹಳೆಯ ಅಹ್ಮದಿಯರಾದ ಮತ್ತು ಜನ್ಮತಃ ಅಹ್ಮದಿಯರಾದ ನಾವು ನಮ್ಮ ಸ್ಥಿತಿಯ ಬಗ್ಗೆ ನೋಡಬೇಕು. ನಮ್ಮ ಹೊಣೆಗಾರಿಕೆಗಳ ಬಗ್ಗೆ ಶ್ರದ್ಧೆ ನೀಡಬೇಕು. ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸಬೇಕು. ನಮ್ಮ ಕರ್ಮಗಳ ಸ್ಥಿತಿಗಳನ್ನು ಸುಧಾರಣೆ ಮಾಡಬೇಕು. ನಮ್ಮ ಸೋಮಾರಿತನ ನಮ್ಮನ್ನು ಅನುಗ್ರಹಗಳಿಂದ ವಂಚಿತರನ್ನಾಗಿ ಮಾಡದಿರಲಿ. ಅಹ್ಮದಿಯಾ ಜಮಾಅತ್ ಅಭಿವೃದ್ಧಿ ಹೊಂದುತ್ತಾ ಹೋಗುವುದೆಂಬುದು ಅಲ್ಲಾಹನ ವಿಧಿ ನಿರ್ಣಯವಾಗಿದೆ. ಅದು ಅಭಿವೃದ್ಧಿ ಹೊಂದುತ್ತಾ ಸಾಗುವುದು. ನಾವು ಈ ಅಭಿವೃದ್ಧಿಯಲ್ಲಿ ಭಾಗವಹಿಸುವವರಾಗಲು ನಾವು ಯಾವಾಗಲೂ ಅದರ ಬಗ್ಗೆ ಶ್ರದ್ಧೆ ನೀಡುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: "ಒಂದು ಕಾಲ ಹೇಗಿತ್ತೆಂದರೆ ಒಂದೆರಡು ಜನರು ಮಾತ್ರ ನನ್ನೊಂದಿಗೆ ಇದ್ದರು. ಬೇರೆ ಯಾರೂ ಇರಲಿಲ್ಲ. ಈಗ ಗುಂಪು ಗುಂಪಾಗಿ ಜನರು ಬರುತ್ತಿದ್ದಾರೆ. **ಯಅ್‌ತೂನ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್.** (ನಿನ್ನ ಬಳಿಗೆ ಪ್ರಯಾಸಪಟ್ಟು ಜನರು ತಂಡ ತಂಡವಾಗಿ ಆಗಮಿಸುವರು). ಶತ್ರುಗಳು ಜನರನ್ನು ತಡೆಯಲು ಕಠಿಣ ಪರಿಶ್ರಮ ನಡೆಸಿದರು. ಆದರೆ ಅಲ್ಲಾಹನ ಭವಿಷ್ಯವಾಣಿ ಈಡೇರಿತು. ನನ್ನ ಬಳಿಗೆ ಹೊಸದಾಗಿ ಬರುವ ವ್ಯಕ್ತಿ ಈ ಇಲ್‌ಹಾಮಿನ ಒಂದು ದೃಷ್ಟಾಂತವಾಗಿ ಆಗಮಿಸುತ್ತಾನೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ನಮ್ಮ ಜಮಾಅತಿನ ಈಮಾನ್ ಬಲಹೀನವಾಗುವುದನ್ನು ಅಲ್ಲಾಹನು ಇಚ್ಛಿಸುವುದಿಲ್ಲ. ಅಲ್ಲಾಹನು ನಮ್ಮ ಜಮಾಅತಿನ ಜನರ ಈಮಾನನ್ನು ವರ್ಧಿಸಲು ದೃಷ್ಟಾಂತಗಳನ್ನು ತೋರಿಸುತ್ತಾ ಇರುತ್ತಾನೆ".

ಅಲ್ಲಾಹನ ಅನುಗ್ರಹದಿಂದ ಇಂತಹ ದೃಷ್ಟಾಂತಗಳು ಈಗ ಸಹ ಕಾಣಿಸುತ್ತಾ ಇವೆ. ಆದರೆ ಕೆಲವು ದುರದೃಷ್ಟಶಾಲಿಗಳು ಈ ದೃಷ್ಟಾಂತಗಳನ್ನು ಕಂಡು ಪಾಠ ಕಲಿತುಕೊಳ್ಳುವುದಿಲ್ಲ. ಅವರು ಸತ್ಯವನ್ನು ಗುರುತಿಸಲು ಪ್ರಯತ್ನ ಮಾಡುವುದಿಲ್ಲ. ಅವರು ತಮ್ಮ ವಿರೋಧವನ್ನು ವರ್ಧಿಸುತ್ತಾ ಇದ್ದಾರೆ. ಇಂತಹ ಜನರು ತಮ್ಮ ಅಂತಿಮಗತಿ ಏನೆಂದು ಕಾಣುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಲ್ಲಾಹನೇ ನನ್ನನ್ನು ನೇಮಿಸಿದ್ದಾನೆ. ಅವನೇ ನನ್ನನ್ನು ಕಳುಹಿಸಿರುವನು. ಅವರು (ಶತ್ರುಗಳು) ತಾನು ಅಲ್ಲಾಹನ ಆಜ್ಞೆ ಪ್ರಕಾರ ಬಂದಿರುವೆನು ಎಂದು ವಾದಿಸುವವನು ಅಲ್ಲಾಹನ ಸಹಾಯವನ್ನು ಪಡೆಯುತ್ತಿರುವನೋ ಇಲ್ಲವೋ ಎಂದು ನೋಡುವುದಿಲ್ಲ. ಶತ್ರುಗಳು ದೃಷ್ಟಾಂತಗಳ ಮೇಲೆ ದೃಷ್ಟಾಂತಗಳನ್ನು ಕಂಡ ನಂತರವೂ ಸಹ ಅವು ಸುಳ್ಳು ಎಂದು ಹೇಳುತ್ತಾರೆ. ಅವರು ಅಲ್ಲಾಹನಿಂದ ಲಭಿಸುವ ನಿರಂತರ ಸಹಾಯವನ್ನು ಕಂಡ ಬಳಿಕವೂ 'ಇದು ಮಾಯಾಜಾಲ, ಇದು ಜಾದು' ಎಂದು ಹೇಳಿದರು. ಅಲ್ಲಾಹನ ವಚನಗಳನ್ನು ಗೌರವಿಸದ ಜನರಿಂದ ನಾನು ಏನನ್ನು ಪ್ರತೀಕ್ಷಿಸಲು ಸಾಧ್ಯ? ಅಲ್ಲಾಹನ ವಚನವನ್ನು ಗೌರವಿಸುವವರ ಲಕ್ಷಣ ಅವರು ಅಲ್ಲಾಹನ ಹೆಸರು ಆಲಿಸಿದ ಕೂಡಲೆ ತಮ್ಮ ಆಯುಧಗಳನ್ನು ಕೆಳಗೆ ಹಾಕಬೇಕಾಗಿತ್ತು. ಆದರೆ ಈ ಜನರು ತಮ್ಮ ಕೆಡುಕುಗಳಲ್ಲಿ ವರ್ಧಿಸಿರುವರು. ಅಂತಿಮ ವಿಜಯ ಯಾರಿಗೆ ಲಭಿಸುತ್ತದೆ ಎಂದು ಈ ಜನರು ಕಾಣುವರು."

ಅಲ್ಲಾಹನು ಈ ಶತ್ರುಗಳಿಗೆ ಅವರ ಕೆಟ್ಟ ಗತಿಯನ್ನು ಬೇಗನೆ ತೋರಿಸಿಕೊಡಲಿ. **ಇನ್‌ಶಾಅಲ್ಲಾಹ್–** ಅಹ್ಮದಿಯ ಜಮಾಅತ್ ವೇಗವಾಗಿ ಮುಂದೆ ಸಾಗುತ್ತಾ ಹೋಗುವುದು. ಅದು ಇನ್ನೂ ಹೆಚ್ಚು ವೇಗದಿಂದ ಮುಂದುವರಿಯುವಂತಾಗಲಿ. ನಾವು ಸಹ ಯಾವಾಗಲೂ ಅದರಲ್ಲಿ ಭಾಗವಹಿಸುವಂತಾಗಲೀ.

(ಕೊನೆಗೆ ಹುಝೂರ್ ಕೆಲವು ಮೃತರ ಬಗ್ಗೆ ವಿವರಣೆ ನೀಡಿದರು. ಜುಮುಅ ನಮಾಝ್ ನಂತರ ಅವರ ಜನಾಝ ನಮಾಝ್ ನಿರ್ವಹಿಸಲಾಯಿತು.)

---------------*****---------------


*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 12-09-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*



*Email*: khutuba.kannada@gmail.com